# ॥ ಶ್ರೀಮದ್ಭಗವದ್ಗೀತೆ ಶುದ್ಧ ಉಚ್ಚಾರಣಾ ಮಾರ್ಗದರ್ಶಿ - ಹಂತ 2 ॥

## ವರ್ಣಸ್ಥಾನ ಮತ್ತು ಅವುಗಳ ಉಚ್ಚಾರಣೆ

- ಸಂಸ್ಕೃತ ಭಾಷೆಯಲ್ಲಿ, ಅಕ್ಷರಗಳ ಉಚ್ಚಾರಣೆಗಾಗಿ ಬಾಯಿಯ ವಿವಿಧ ಸ್ಥಳಗಳನ್ನು ಬಳಸಲಾಗುತ್ತದೆ. ಈ ಕೆಳಗಿನ ಚಿತ್ರದಲ್ಲಿ ಅಕ್ಷರಗಳ ಉಚ್ಚಾರಣಾ ಸ್ಥಳಗಳನ್ನು ತೋರಿಸಲಾಗಿದೆ. ನಿಗದಿತ ಜಾಗವನ್ನು ಬಳಸುವ ಮೂಲಕ, ನಾವು ನಮ್ಮ ಉಚ್ಚಾರಣೆಯನ್ನು ಸಾಧ್ಯವಾದಷ್ಟು ಶುದ್ಧಗೊಳಿಸಬಹುದು. ಕೆಳಗಿನ ಚಿತ್ರದಿಂದ ವೈಜ್ಞಾನಿಕ ಮತ್ತು ಶ್ರೀಮಂತ ಸಂಸ್ಕೃತ ಭಾಷೆಯ ಬಗ್ಗೆ ಹೀಗೆ ತಿಳಿಯಬಹುದು.
- 'ಸ್', 'ಶ್' ಮತ್ತು 'ಷ್' ಕ್ರಮವಾಗಿ 'ದಂತ್ಯ', 'ತಾಲವ್ಯ' ಮತ್ತು 'ಮೂರ್ಧನ್ಯ' ವರ್ಣಗಳು. ಒಂದೇ ವರ್ಗದ ಅಕ್ಷರಗಳನ್ನು ಹೇಗೆ ಉಚ್ಚರಿಸಲಾಗುತ್ತದೆಯೋ ಅದೇ ರೀತಿಯಲ್ಲಿ ಅವುಗಳನ್ನು ಉಚ್ಚರಿಸಿ.

  **# ನೆನಪಿನಲ್ಲಿಡಿ ಅಕ್ಷರದ ಉಚ್ಚಾರಣೆ ನಿಗದಿತ ಸ್ಥಳವನ್ನು ಬಳಸುವ ಮೂಲಕ, ನಾವು ನಮ್ಮ ಉಚ್ಚಾರಣೆಯನ್ನು ಸಾಧ್ಯವಾದಷ್ಟು ಶುದ್ಧಗೊಳಿಸಬಹುದು.**

- **ಅಕುಹವಿಸರ್ಜನೀಯಾನಾಂ ಕಂಠ್ಯ:**
  **ಕಂಠ್ಯ** - ಅ, ಆ, ಕ್ ವರ್ಗ, ಹ್, ವಿಸರ್ಗ (:)
- **ಇಚುಯಶಾನಾಂತಾಲವ್ಯ:**
  **ತಾಲವ್ಯ** - ಇ, ಈ, ಚ್ ವರ್ಗ, ಯ್, ಶ್
- **ಋಟುರಷಾಣಾಂಮೂರ್ಧನ್ಯ:**
  **ಮೂರ್ಧನ್ಯ** - ಋ, ೠ, ಟ್ ವರ್ಗ, ರ್, ಷ್
- **ಲೃತುಲಸಾನಾಂ ದಂತ್ಯ:**
  **ದಂತ್ಯ** - ಲೃ, ತ್ ವರ್ಗ, ಲ್, ಸ್
- **ಉಪೂಪಧ್ಮಾನೀಯಾಂಓಷ್ಠ್ಯ**
  **ಓಷ್ಠ್ಯ** - ಉ, ಊ, ಪ್ ವರ್ಗ, ಉಪಧ್ಮಾನೀಯಗಳು ಪ*, ಫ*
- **ಏದೈತೋಃಕಂಠ್ಯ-ತಾಲವ್ಯ:**
  **ಕಂಠ್ಯ-ತಾಲವ್ಯ** - ಎ, ಐ
- **ಓದೌತೋಃಕಂಠ್ಯ-ಓಷ್ಠ್ಯ:**
  **ಕಂಠ್ಯ-ಓಷ್ಠ್ಯ** - ಓ, ಔ
- **ಞಮಙಣನಾನಾಂನಾಸಿಕಾಚ:**
  **ಮುಖ್ಯ ಅನುನಾಸಿಕಗಳು** - ಙ್, ಞ್, ಣ್, ನ್, ಮ್
- **ವಕಾರವುದಂತ್ಯೋಷ್ಠ್ಮಮ್**
  **ದಂತ್ಯ- ಓಷ್ಠ್ಯ** – ವ್
- **ಜಿಹ್ವಾಮೂಲೀಯಸ್ಯಜಿಹ್ವಾಮೂಲಮ್**
  **ಜಿಹ್ವಾಮೂಲ** - ಜಿಹ್ವಾಮೂಲೀಯ ಕ*, ಖ*
- **ನಾಸಿಕಾಽನುಸ್ವಾರಸ್ಯ**
  **ನಾಸಿಕಾ** – ಅನುಸ್ವಾರ (೦)






ಗೀತಾ ಪರಿವಾರದ ಸಾಹಿತ್ಯದ ಉಪಯೋಗ ಬೇರೆ ಯಾವುದೇ ಸ್ಥಳದಲ್ಲಿ ಮಾಡಲು ಪೂರ್ವಾನುಮತಿ ಪಡೆಯುವ ಅವಶ್ಯಕತೆ ಇದೆ. ಪೂರ್ವಾನುಮತಿ ಪಡೆಯಲು consent@learngeeta.com ನಲ್ಲಿ ನಮಗೆ ಬರೆದು ಕಳುಹಿಸಿ

## ಅವಗ್ರಹ –

- ಅವಗ್ರಹಕ್ಕೆ ಸ್ವಂತ ಉಚ್ಚಾರಣೆ ಇಲ್ಲ. ಇದನ್ನು **'S'** ಚಿನ್ಹೆಯಿಂದ ಗುರುತಿಸಲಾಗುತ್ತದೆ. ಅವಗ್ರಹವು ಎರಡು ಪದಗಳ ಜೋಡಣೆಯಿಂದ (ಸಂಧಿಯಿಂದ) ಉಂಟಾಗುವ ಅಕಾರವನ್ನು, ಏಕಾರವನ್ನು ಬಿಟ್ಟು ಉಚ್ಚರಿಸುವುದನ್ನು ಸೂಚಿಸುವ ಸಂಕೇತವಾಗಿದೆ. ಅವಗ್ರಹವು ಯಾವಾಗಲೂ ಆ, ಏ ಅಥವಾ ಓ ಅಕ್ಷರಗಳ ನಂತರ ಬರುತ್ತದೆ.

## ಶ್ರೀಮದ್ಭಗವದ್ಗೀತಾದಲ್ಲಿ ಬರುವ ಛಂದಸ್ಸುಗಳು

- ಸಂಸ್ಕೃತದಲ್ಲಿ ಅನೇಕ ಪ್ರಕಾರದ ಛಂದಸ್ಸುಗಳಿವೆ. ಆದರೆ ಶ್ರೀಮದ್ಭಗವದ್ಗೀತೆಯಲ್ಲಿ ಎರಡು ಪ್ರಕಾರದ ಛಂದಸ್ಸುಗಳ ಉಪಯೋಗವಿದೆ. ಅವು ಯಾವುವೆಂದರೆ : **1. ಅನುಷ್ಟುಪ್ ಛಂದಸ್ಸು** - ಇದರಲ್ಲಿ ಪ್ರತಿ ಚರಣದಲ್ಲೂ **ಎಂಟು**(8) ಅಕ್ಷರಗಳಿರುತ್ತದೆ. ಒಂದು ಶ್ಲೋಕದಲ್ಲಿ ಒಟ್ಟು **32** ಅಕ್ಷರಗಳು. **2. ತ್ರಿಷ್ಟುಪ್ ಛಂದಸ್ಸು** - ಇದರಲ್ಲಿ ಪ್ರತಿ ಚರಣದಲ್ಲೂ **ಹನ್ನೊಂದು**(11) ಅಕ್ಷರಗಳಿರುತ್ತದೆ. ಒಂದು ಶ್ಲೋಕದಲ್ಲಿ ಒಟ್ಟು **44** ಅಕ್ಷರಗಳು. ಛಂದಸ್ಸಿನ ಶಾಸ್ತ್ರದಲ್ಲಿ ಶ್ಲೋಕವನ್ನು ಪಠಣ ಮಾಡುವಾಗ ಪ್ರತಿ ಚರಣವನ್ನು ಬೇರ್ಪಡಿಸಿ ಉಚ್ಚರಿಸುವುದನ್ನು **ಯತಿ** ಎಂದು ಹೇಳುತ್ತಾರೆ.

  **# ಗಮನಿಸಿ**: ಭಗವದ್ಗೀತೆಯಲ್ಲಿ ಎಲ್ಲ ಶ್ಲೋಕಗಳೂ ಮೇಲೆ ತಿಳಿಸಿರುವ ಎರಡು ಛಂದಸ್ಸುಗಳನ್ನು ಕಾಣಬಹುದು. ಆದರೆ ಈ ಕೆಳಗೆ ತಿಳಿಸಿರುವ ಐದು ಶ್ಲೋಕಗಳಲ್ಲಿ ಒಂದು ಅಕ್ಷರ ಹೆಚ್ಚಿರುವುದನ್ನು ಗಮನಿಸಬಹುದು.**ಅ 2/ಶ್ಲೋ 6, ಅ 2/ಶ್ಲೋ 29, ಅ 8/ಶ್ಲೋ 10, ಅ 11/ಶ್ಲೋ 1, ಅ 15/ಶ್ಲೋ 3.**

### ಶ್ಲೋಕದ ಆರಂಭದಲ್ಲಿ ಸ್ ಹಲಂತದಿಂದ ಪದಗಳ ಉಚ್ಚಾರಣೆಯ ಕ್ರಮ

- ಯಾವುದೇ ಪದವನ್ನು **ಸ್** ಅಕ್ಷರ (ಸ್ವರ ರಹಿತ) ದಿಂದ ಪ್ರಾರಂಭಿಸುವಾಗ ಇನ್ಯಾವುದೇ ಸ್ವರವನ್ನು **ಸ್** ಅಕ್ಷರದ ಹಿಂದೆ ಸೇರಿಸಿ ಉಚ್ಚರಿಸಬಾರದು.**ಉದಾ**: **ಸ್ನಾನ** ಎಂಬುದು ಸರಿಯಾದ ಉಚ್ಚಾರಣೆ. ಇದಕ್ಕೆ **ಇ** ಎಂಬ ಸ್ವರವನ್ನು ಸೇರಿಸಿ **ಇಸ್ನಾನ** ಎಂದು ಉಚ್ಚಾರಣೆ ಮಾಡಬಾರದು.

## ಆಘಾತದ ನಿಯಮ :

- **ದ್** ಮತ್ತು **ಯ** ಅಕ್ಷರಗಳನ್ನು ಸಂಯೋಗಿಸಿದಾಗ **ದ್ಯ** ಎಂದಾಗುವುದು ಮತ್ತು **ದ್**, **ಧ್** ಮತ್ತು **ಯ** ಅಕ್ಷರಗಳನ್ನು ಸಂಯೋಗಿಸಿದಾಗ **ದ್ಧ್ಯ** ಎಂದಾಗುವುದು. ಮೊದಲನೆಯ ಸಂಯೋಗದಲ್ಲಿ ಎರಡು ವ್ಯಂಜನ ಅಕ್ಷರಗಳಿವೆ ಹಾಗೂ ಎರಡನೆಯ ಸಂಯೋಗದಲ್ಲಿ ಮೂರು ವ್ಯಂಜನ ಅಕ್ಷರಗಳಿವೆ. ಈ ಎರಡೂ ಸಂಯುಕ್ತಾಕ್ಷರದ **ಉಚ್ಚಾರಣೆಯ ಕ್ರಮದಲ್ಲಿ ಆಘಾತದ ನಿಯಮವನ್ನೇ ಅನುಸರಿಸಬೇಕು**.
- ಆಘಾತ ನಿಯಮದ ಪ್ರಕಾರ ಸಂಯುಕ್ತಾಕ್ಷರದ ಮೊದಲನೆಯ ಅಕ್ಷರವನ್ನು ದ್ವಿಗುಣಗೊಳಿಸಿ ಉಚ್ಚರಿಸಬೇಕು. ಈ ದ್ವಿಗುಣಗೊಳಿಸುವ ಪ್ರಕ್ರಿಯೆಯನ್ನು ಕೆಳಗಿನ ಉದಾಹರಣೆಗಳಿಂದ ಅರ್ಥಮಾಡಿಕೊಳ್ಳಬಹುದು.

  - ಅಕ್ಷರ = ಅ **ಕ್** ಷರ > ಅ **ಕ್ ಕ್** ಷರ = ಅಕ್ಷರ
  - ವ್ಯಾಖ್ಯಾ = ವ್ಯಾ **ಖ್** ಯಾ > ವ್ಯಾ **ಖ್ ಖ್** ಯಾ > ವ್ಯಾ **ಕ್ ಖ್** ಯಾ = ವ್ಯಾಖ್ಯಾ
  - ವಿದ್ಧಿ = ವಿ **ದ್** ಧಿ > ವಿ **ದ್ ದ್** ಧಿ > ವಿ **ದ್** ಧಿ = ವಿದ್ಧಿ
  - ಯುಧ್ಯತಿ = ಯು **ಧ್** ಯತಿ > ಯು **ಧ್ ಧ್** ಯತಿ > ಯು **ದ್ ಧ್** ಯತಿ = ಯುಧ್ಯತಿ


*ಗೀತಾ ಪರಿವಾರದ ಸಾಹಿತ್ಯದ ಉಪಯೋಗ ಬೇರೆ ಯಾವುದೇ ಸ್ಥಳದಲ್ಲಿ ಮಾಡಲು ಪೂರ್ವಾನುಮತಿ ಪಡೆಯುವ ಅವಶ್ಯಕತೆ ಇದೆ. ಪೂರ್ವಾನುಮತಿ ಪಡೆಯಲು consent@learngeeta.com ನಲ್ಲಿ ನಮಗೆ ಬರೆದು ಕಳುಹಿಸಿ*

- ಕೆಲವೆಡೆ ಸ್ವರದ ನಂತರ ಸಂಯುಕ್ತ ಅಕ್ಷರವಿದ್ದರೂ ಕೂಡ, ಅಪವಾದ ನಿಯಮದ ಕಾರಣ ಆಘಾತಗಳನ್ನು ನೀಡಲಾಗಿಲ್ಲ. ಉದಾ: ಒಂದೇ ವ್ಯಂಜನ ಎರಡು ಬಾರಿ ಕಾಣಿಸಿಕೊಂಡರೆ, ಮೂರು ವ್ಯಂಜನಗಳು ಸಂಯೋಜಿಸಿದಾಗ, ರಫಾರ (ಮೇಲೆ ರ್) ಅಥವಾ ಹಕಾರ ಇದ್ದರೆ, ಇತ್ಯಾದಿ. ಯಾವ ಅಕ್ಷರದ ಮೇಲೆ ಆಘಾತದ ಚಿಹ್ನೆ ಇಲ್ಲ ಅಲ್ಲಿ ಆಘಾತವಿಲ್ಲದೆ ಅಭ್ಯಾಸ ಮಾಡಿ.

  **# ನೆನಪಿನಲ್ಲಿಡಿ - ಸಂಯುಕ್ತ ವರ್ಣಮಾಲೆಯಲ್ಲಿ ಮೊದಲ ಅಕ್ಷರವು 'ವರ್ಗಗಳ ಮೊದಲ ನಾಲ್ಕು ಅಕ್ಷರಗಳಿಂದ ಹೆಚ್ಚುವರಿ' ಆಗಿದ್ದರೆ, ಸಂಯುಕ್ತ ವರ್ಣಮಾಲೆಯ ಮೊದಲ ಅಕ್ಷರವು ಮಾತ್ರ ದ್ವಿತ್ವವನ್ನು ಹೊಂದಿರುತ್ತದೆ.**

# ಸಂಧಿ - ನಿಯಮ

ಎರಡು ಅಕ್ಷರಗಳನ್ನು ಸೇರಿಸಿ ಉಚ್ಚರಿಸಿದಾಗ ಅದು ಸಂಧಿಯಾಗುತ್ತದೆ. ಎರಡು ಅಕ್ಷರಗಳು ಸ್ವರವಾಗಿದ್ದರೆ ಅದನ್ನು **ಸ್ವರ ಸಂಧಿ**ಯೆಂದೂ, ಅದರಲ್ಲಿ ಒಂದು ಅಕ್ಷರವು ವ್ಯಂಜನವಾಗಿದ್ದರೆ ಅದನ್ನು **ವ್ಯಂಜನ ಸಂಧಿ**ಯೆಂದೂ ಕರೆಯುತ್ತಾರೆ. ಹಾಗೆಯೇ ಅನುಸ್ವಾರದ ಸ್ಥಳದಲ್ಲಿ ಬದಲಾವಣೆಯಾದರೆ, **ಅನುಸ್ವಾರ ಸಂಧಿ**ಯೆಂದೂ ಮತ್ತು ವಿಸರ್ಗದ ಸ್ಥಳದಲ್ಲಿ ಬದಲಾವಣೆಯಾದರೆ, **ವಿಸರ್ಗ ಸಂಧಿ**ಯೆಂದೂ ಕರೆಯುತ್ತಾರೆ.

# ವಿಸರ್ಗ ಸಂಧಿ

ಭಗವದ್ಗೀತೆಯ ಶ್ಲೋಕದ ಅನೇಕ ಸ್ಥಳಗಳಲ್ಲಿ ವಿಸರ್ಗವನ್ನು ಸಂಧಿ ಮಾಡಿದಾಗ **ರ್**, **ಸ್**, **ಶ್** ಮತ್ತು **ಷ್** ಅಕ್ಷರದ ಬದಲಾವಣೆಯನ್ನು **ಸ್ತರ - 1**ರಲ್ಲಿ ನೋಡಿದ್ದೆವು. **ಉದಾ**: ಬುದ್ಧಿಃ ಯೋ - ಬುದ್ಧಿರ್ಯೋ ; ಪರಯೋಪೇತಾಃ ತೇ - ಪರಯೋಪೇತಾಸ್ತೇ : ವೇದ್ಯೈಃ ಚ – ವೇದ್ಯೈಶ್ಚ ಈಗ **ವಿಸರ್ಗ ಸಂಧಿ**ಯ ವಿಸ್ತಾರವನ್ನು ನೋಡೋಣ.

**ವಿಸರ್ಗ ಸಂಧಿ** ಯು ವಿಸರ್ಗಕ್ಕೆ ಹಿಂದಿನ ಮತ್ತು ಮುಂದಿನ ಅಕ್ಷರಗಳ ಲಕ್ಷಣದ ಮೇಲೆ ಆಧಾರಿತವಾಗಿರುತ್ತದೆ. ಆದ್ದರಿಂದ ವಿಸರ್ಗ ಸಂಧಿಯ ವಿಷಯವನ್ನು ಹಾಗೂ ಅದರ ಬದಲಾವಣೆಯ ಕ್ರಮವನ್ನು ತಿಳಿದುಕೊಳ್ಳುವುದು ಮಹತ್ತ್ವಪೂರ್ಣವಾಗಿದೆ. ಅದರ ನಿಯಮಗಳು ಈ ಕೆಳಕಂಡಂತಿವೆ:

1. ವಿಸರ್ಗದ ಹಿಂದಿನ ಅಕ್ಷರವು **ಅ** ಕಾರವಾಗಿದ್ದು ಮತ್ತು ಮುಂದಿನ ಅಕ್ಷರವು **ಅ** ಕಾರವಾಗಿದ್ದರೆ ಅಥವಾ **ಯಾವುದೇ ಮೃದು ಅಕ್ಷರ**ವಾಗಿದ್ದರೆ, ಆಗ **ವಿಸರ್ಗ** ಮತ್ತು **ಅದರ ಹಿಂದಿನ ಅಕ್ಷರವು ಬದಲಾವಣೆ**ಯಾಗುತ್ತದೆ ಹಾಗೂ ಅದರ ಸ್ಥಾನವು **ಓ ಕಾರ** ಎಂದಾಗುತ್ತದೆ. (**ಮೃದು ವ್ಯಂಜನಗಳು** - ಗ, ಘ, ಜ, ಝ, ಡ, ಢ, ದ, ಧ, ಬ, ಭ, ಯ, ರ, ಲ, ವ, ಹ ಮತ್ತು ಎಲ್ಲ ಅನುನಾಸಿಕ ಅಕ್ಷರಗಳು ಹಾಗೂ **ಕಠೋರ ವ್ಯಂಜನಗಳು** - ಕ, ಖ, ಚ, ಛ, ಟ, ಠ, ತ, ಥ, ಪ, ಫ, ಶ, ಷ, ಸ)

   **ಗಮನಿಸಿ** : ವಿಸರ್ಗ ಮುಂದಿನ ಅಕ್ಷರವು **ಅ** ಕಾರ ಆಗಿದ್ದರೆ, ಸಂಧಿಯಾದ ಮೇಲೆ **ಅ** ಕಾರವು **ಓಕಾರ**ವಾಗಿ ಬದಲಾಗುತ್ತದೆ ಹಾಗೂ **ಅವಗ್ರಹ (S)** ಚಿನ್ಹೆಯನ್ನು ಬರೆಯಲಾಗುತ್ತದೆ. ಇಲ್ಲಿ ವಿಸರ್ಗದ ನಂತರ **ಅ** ಕಾರವು ಲೋಪವಾಗಿ ಅದು **ಅವಗ್ರಹ**ದ ಚಿನ್ಹೆ **S** ದಲ್ಲಿ ಪರಿವರ್ತನೆಯಾಗುತ್ತದೆ.

| **ಹಿಂದಿನ ಅಕ್ಷರ** | **ವಿಸರ್ಗ** | **ಮುಂದಿನ ಅಕ್ಷರ** | **ವಿಸರ್ಗದ ಬದಲಾವಣೆಯ ರೂಪ** | **ಉದಾಹರಣೆ** |
|---|---|---|---|---|
| ಅ | ಃ | ಅ/ ಮೃದು ವ್ಯಂಜನ | **ಓ/ ಓS** | ದರ್ಪಃ + ಅಭಿಮಾನಶ್ಚ = ದರ್ಪೋSಭಿಮಾನಶ್ಚ (16/4)<br>ಚೇತ್ಸುದುರಾಚಾರಃ + ಭಜತೇ =ಚೇತ್ಸುದುರಾಚಾರೋSಭಜತೇ(9/30) |


ಗೀತಾ ಪರಿವಾರದ ಸಾಹಿತ್ಯದ ಉಪಯೋಗ ಬೇರೆ ಯಾವುದೇ ಸ್ಥಳದಲ್ಲಿ ಮಾಡಲು ಪೂರ್ವಾನುಮತಿ ಪಡೆಯುವ ಅವಶ್ಯಕತೆ ಇದೆ. ಪೂರ್ವಾನುಮತಿ ಪಡೆಯಲು consent@learngeeta.com ನಲ್ಲಿ ನಮಗೆ ಬರೆದು ಕಳುಹಿಸಿ

2. ವಿಸರ್ಗದ ಹಿಂದಿನ ಅಕ್ಷರವು **ಅಕಾರ** ಆಗಿದ್ದು ಮತ್ತು ಮುಂದಿನ ಅಕ್ಷರವು **ಅಕಾರ ಭಿನ್ನ ಸ್ವರ**ವಾಗಿದ್ದರೆ, ಆಗ ವಿಸರ್ಗವು **ಲೋಪ**ವಾಗುತ್ತದೆ.

**ಗಮನಿಸಿ** : ಈ ನಿಯಮವು ಅವ್ಯಯಗಳಿಗೆ ಅನ್ವಯಿಸುವುದಿಲ್ಲ. ಹೆಚ್ಚಿನ ಮಾಹಿತಿಗೆ **ನಿಯಮ-5**ದನ್ನು ನೋಡಿ.

| ಹಿಂದಿನ ಅಕ್ಷರ | ವಿಸರ್ಗ | ಮುಂದಿನ ಅಕ್ಷರ | ವಿಸರ್ಗದ ಬದಲಾವಣೆಯ ರೂಪ | ಉದಾಹರಣೆ |
|---|---|---|---|---|
| ಅ | ಃ | ಅಕಾರ ಭಿನ್ನ ಸ್ವರ | **ಲೋಪ** | ಮನಃ + ಆಧತ್ಸ್ವ = ಮನ ಆಧತ್ಸ್ವ (12/8) |

3. ವಿಸರ್ಗದ ಹಿಂದಿನ ಅಕ್ಷರದಲ್ಲಿ **ಆ ಸ್ವರ**ವಿದ್ದು ಮತ್ತು ಮುಂದಿನ ಅಕ್ಷರವು **ಯಾವುದೇ ಸ್ವರ**ವಾಗಿದ್ದರೆ ಅಥವಾ **ಮೃದು ವ್ಯಂಜನ**ವಾಗಿದ್ದರೆ, ಸಂಧಿಯಾದಾಗ ವಿಸರ್ಗವು **ಲೋಪ**ವಾಗುತ್ತದೆ.

| ಹಿಂದಿನ ಅಕ್ಷರ | ವಿಸರ್ಗ | ಮುಂದಿನ ಅಕ್ಷರ | ವಿಸರ್ಗದ ಬದಲಾವಣೆಯ ರೂಪ | ಉದಾಹರಣೆ |
|---|---|---|---|---|
| ಆ | ಃ | ಯಾವುದೇ ಸ್ವರ / ಮೃದು ವ್ಯಂಜನ | **ಲೋಪ** | ಮಾಯಯಾಪಹೃತಜ್ಞಾನಾಃ + ಆಸುರಮ್ = ಮಾಯಯಾಪಹೃತಜ್ಞಾನಾ ಆಸುರಮ್ 7/15 |

4. ವಿಸರ್ಗದ ಹಿಂದಿನ ಅಕ್ಷರವು **ಅ/ಆ ಬದಲು ಭಿನ್ನ**ವಾಗಿದ್ದು ಮತ್ತು ಮುಂದಿನ ಅಕ್ಷರವು **ಯಾವುದೇ ಸ್ವರ**ವಾಗಿದ್ದರೆ ಅಥವಾ **ಯಾವುದೇ ಮೃದು ವ್ಯಂಜನ**ವಾಗಿದ್ದರೆ, ಸಂಧಿಯಾದಾಗ ವಿಸರ್ಗವು **ರ್** ಆಗಿ ಬದಲಾಗುತ್ತದೆ ಹಾಗೂ **ರ್** ಅನ್ನು ವಿಸರ್ಗದ ಮುಂದಿನ ಅಕ್ಷರದೊಂದಿಗೆ ಸೇರಿಸಿ ಉಚ್ಚರಿಸಲಾಗುತ್ತದೆ.

| ಹಿಂದಿನ ಅಕ್ಷರ | ವಿಸರ್ಗ | ಮುಂದಿನ ಅಕ್ಷರ | ವಿಸರ್ಗದ ಬದಲಾವಣೆಯ ರೂಪ | ಉದಾಹರಣೆ |
|---|---|---|---|---|
| ಅ/ಆ ಬದಲು ಭಿನ್ನಸ್ವರ | ಃ | ಯಾವುದೇ ಸ್ವರ / ಮೃದು ವ್ಯಂಜನ | **ರ್** | ದುಃ + ನಿರೀಕ್ಷಣಮ್ = ದು**ರ್ನಿ**ರೀಕ್ಷಣಮ್ 11/17 |

5. ವಿಸರ್ಗದ ಹಿಂದಿನ ಪದವು **ಅವ್ಯಯ**ವಾಗಿದ್ದು ಮತ್ತು **ಯಾವುದೇ ಸ್ವರ**ವಾಗಿದ್ದರೆ ಹಾಗೂ ವಿಸರ್ಗದ ಮುಂದಿನ ಅಕ್ಷರವು **ಯಾವುದೇ ಸ್ವರ** ಅಥವಾ **ಯಾವುದೇ ಮೃದು ವ್ಯಂಜನ**ವಾಗಿದ್ದರೆ, ಸಂಧಿಯಾದಾಗ ವಿಸರ್ಗವು **ರ್** ಆಗಿ ಬದಲಾಗುತ್ತದೆ. **ರ್** ಅನ್ನು ವಿಸರ್ಗದ ಮುಂದಿನ ಅಕ್ಷರದೊಂದಿಗೆ ಸೇರಿಸಿ ಉಚ್ಚರಿಸಲಾಗುತ್ತದೆ.

| ಹಿಂದಿನ ಅಕ್ಷರ | ವಿಸರ್ಗ | ಮುಂದಿನ ಅಕ್ಷರ | ವಿಸರ್ಗದ ಬದಲಾವಣೆಯ ರೂಪ | ಉದಾಹರಣೆ |
|---|---|---|---|---|
| ಅವ್ಯಯದ ಯಾವುದೇ ಸ್ವರ | ಃ | ಯಾವುದೇ ಸ್ವರ/ ಯಾವುದೇ ಮೃದು ವ್ಯಂಜನ | **ರ್** | ಪುನಃ + ಜನ್ಮ = ಪುನ**ರ್ಜ**ನ್ಮ (8/16) |


*ಗೀತಾ ಪರಿವಾರದ ಸಾಹಿತ್ಯದ ಉಪಯೋಗ ಬೇರೆ ಯಾವುದೇ ಸ್ಥಳದಲ್ಲಿ ಮಾಡಲು ಪೂರ್ವಾನುಮತಿ ಪಡೆಯುವ ಅವಶ್ಯಕತೆ ಇದೆ. ಪೂರ್ವಾನುಮತಿ ಪಡೆಯಲು consent@learngeeta.com ನಲ್ಲಿ ನಮಗೆ ಬರೆದು ಕಳುಹಿಸಿ*

6. ವಿಸರ್ಗದ ಹಿಂದಿನ ಅಕ್ಷರವು **ಯಾವುದೇ ಸ್ವರ**ವಾಗಿದ್ದು ಮತ್ತು ಮುಂದಿನ ಅಕ್ಷರವು **ಚ್ / ಛ್** ಆಗಿದ್ದರೆ, ಸಂಧಿಯಾದಾಗ **ಶ್ ಕಾರ**ವಾಗಿ ಬದಲಾಗುತ್ತದೆ. ಹಾಗೆಯೇ, ವಿಸರ್ಗದ ನಂತರದ ಅಕ್ಷರವು **ಟ್ / ಠ್** ಆಗಿದ್ದಾಗ **ಷ್ ಕಾರ**ವಾಗಿಯೂ ಮತ್ತು **ತ್ / ಥ್** ಆಗಿದ್ದಾಗ **ಸ್ ಕಾರ**ವಾಗಿಯೂ ಬದಲಾಗುತ್ತದೆ.

| ಹಿಂದಿನ ಅಕ್ಷರ | ವಿಸರ್ಗ | ಮುಂದಿನ ಅಕ್ಷರ | ವಿಸರ್ಗದ ಬದಲಾವಣೆಯ ರೂಪ | ಉದಾಹರಣೆ |
|---|---|---|---|---|
| ಯಾವುದೇ ಸ್ವರ | ಃ | ಚ್ /ಛ್ | **ಶ್** | ಯೋಗಿನಃ + ಚೈನಮ್ = ಯೋಗಿನ**ಶ್ಚೈ**ನಮ್ 15/11 |
| | | ಟ್ /ಠ್ | **ಷ್** | ಧನುಃ + ಠಂಕಾರ = ಧನು**ಷ್ಠಂ**ಕಾರ |
| | | ತ್ /ಥ್ | **ಸ್** | ಹನ್ಯುಃ + ತನ್ಯೆ = ಹನ್ಯು**ಸ್ತ**ನ್ಯೆ 1/46 |

7. ವಿಸರ್ಗದ ಹಿಂದಿನ ಅಕ್ಷರವು **ಯಾವುದೇ ಸ್ವರ**ವಾಗಿದ್ದು ಮತ್ತು ಮುಂದಿನ ಅಕ್ಷರವು **ಕ್ / ಖ್** ಆಗಿದ್ದರೆ, ಸಂಧಿಯಾದಾಗ ವಿಸರ್ಗವು **ಖ್** ಅಕ್ಷರವಾಗಿ ಬದಲಾಗುತ್ತದೆ ಹಾಗೂ ಅದರ ಉಚ್ಚಾರಣೆಯು **ಖ್** ತರಹ ಉಚ್ಚರಿಸಬೇಕು. **ಗಮನಿಸಿ** : ಇಲ್ಲಿ **ಖ್** ತರಹ ಉಚ್ಚಾರಣೆ ಮಾಡಬೇಕೇ ಹೊರತು **ಖ್ ಆಗಿ ಅಲ್ಲ**.

| ಹಿಂದಿನ ಅಕ್ಷರ | ವಿಸರ್ಗ | ಮುಂದಿನ ಅಕ್ಷರ | ವಿಸರ್ಗದ ಬದಲಾವಣೆಯ ರೂಪ | ಉದಾಹರಣೆ |
|---|---|---|---|---|
| ಯಾವುದೇ ಸ್ವರ | ಃ | ಕ್ /ಖ್ | **ಖ್** ತರಹ ಉಚ್ಚಾರಣೆ | ಮೈತ್ರಃ + ಕರುಣ = ಮೈತ್ರಃ**(ಖ್)** ಕರುಣ 12/13 |

8. ವಿಸರ್ಗದ ಹಿಂದಿನ ಅಕ್ಷರವು **ಯಾವುದೇ ಸ್ವರ**ವಾಗಿದ್ದು ಮತ್ತು ಮುಂದಿನ ಅಕ್ಷರವು **ಪ್ / ಫ್** ಆಗಿದ್ದರೆ, ಸಂಧಿಯಾದಾಗ **ವಿಸರ್ಗವು ಫ್** ಅಕ್ಷರವಾಗಿ ಬದಲಾಗುತ್ತದೆ ಹಾಗೂ ಅದರ ಉಚ್ಚಾರಣೆಯು **ಫ್** ತರಹ ಉಚ್ಚರಿಸಬೇಕು. **ಗಮನಿಸಿ** : ಇಲ್ಲಿ **ಫ್** ತರಹ ಉಚ್ಚಾರಣೆ ಮಾಡಬೇಕೇ ಹೊರತು **ಫ್ ಆಗಿ ಅಲ್ಲ**.

| ಹಿಂದಿನ ಅಕ್ಷರ | ವಿಸರ್ಗ | ಮುಂದಿನ ಅಕ್ಷರ | ವಿಸರ್ಗದ ಬದಲಾವಣೆಯ ರೂಪ | ಉದಾಹರಣೆ |
|---|---|---|---|---|
| ಯಾವುದೇ ಸ್ವರ | ಃ | ಪ್ /ಫ್ | **ಫ್** ತರಹ ಉಚ್ಚಾರಣೆ | ತತಃ + ಪದಮ್ = ತತಃ**(ಫ್)** ಪದಮ್ |

**|| ಮುಕ್ತಾಯ ||**


*ಗೀತಾ ಪರಿವಾರದ ಸಾಹಿತ್ಯದ ಉಪಯೋಗ ಬೇರೆ ಯಾವುದೇ ಸ್ಥಳದಲ್ಲಿ ಮಾಡಲು ಪೂರ್ವಾನುಮತಿ ಪಡೆಯುವ ಅವಶ್ಯಕತೆ ಇದೆ. ಪೂರ್ವಾನುಮತಿ ಪಡೆಯಲು consent@learngeeta.com ನಲ್ಲಿ ನಮಗೆ ಬರೆದು ಕಳುಹಿಸಿ*